ಶ್ರೀ ಜಿ. ಟಿ. ದೇವೇಗೌಡ (ಸಹಕಾರ ಸಚಿವರು) :

ಅ) ಮತ್ತು ಆ) ದಿನಾಂಕ: 01–04–2006 ರಿಂದ ಪಟ್ಟಣ ಸಹಕಾರಿ ಬ್ಯಾಂಕುಗಳು ನೇಕಾರರಿಗೆ ಶೇ. 4ರ ಬಡ್ಡಿ ದರದಲ್ಲಿ ಸಾಲ ಒದಗಿಸಬೇಕೆಂದು ತತ್ಸಂಬಂಧದಲ್ಲಿ ನೇಕಾರರಿಗೆ ಒದಗಿಸಲಾದ ಸಾಲಗಳ ಮೇಲೆ ಶೇ. 7.5ರಷ್ಟು ಬಡ್ಡಿ ಸಹಾಯಧನವನ್ನು ಸರ್ಕಾರವು ಭರಿಸಿಕೊಡುವುದಾಗಿ ಆದೇಶ ಹೊರಡಿಸಲಾಗಿದೆ. ಆದರೆ ಪಟ್ಟಣ ಸಹಕಾರ ಬ್ಯಾಂಕುಗಳು ಕೆಳಕಂಡ ಕಾರಣಗಳಿಗಾಗಿ ನೇಕಾರರಿಗೆ ಶೇ.4ರ ಬಡ್ಡಿ ದರದಲ್ಲಿ ಸಾಲ ನೀಡಿರುವುದಿಲ್ಲ.

1) ಅವುಗಳ ನಿಧಿಗಳ ಬೆಲೆಯು (cost of funds) ಹೆಚ್ಚಿದ್ದು ಶೇ.9ರಿಂದ 9.5ರಷ್ಟು ಬಡ್ಡಿ ಸಹಾಯಧನವನ್ನು ಸರ್ಕರವು ಮಂಜೂರು ಮಾಡಬೇಕು.

2) ಬಡ್ಡಿ ಸಹಾಯಧನವನ್ನು ಪ್ರತಿ ತಿಂಗಳು ಅಥವಾ ಕನಿಷ್ಠಪಕ್ಷ 3 ತಿಂಗಳಿಗೊಮ್ಮೆಯಾದರೂ ಭರಿಸಿಕೊಡಬೇಕು. ಇಲ್ಲದಿದ್ದಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಮಾನದಂಡಗಳ ಪ್ರಕಾರ ಅಂತಹ ಸಾಲಗಳು ಎನ್‌ಪಿಎ ಆಗಿ ಪರಿಗಣಿಸಲ್ಪಡುತ್ತವೆ.

ಇ) 2007–08ನೇ ಸಾಲಿಗೆ ಸರ್ಕಾರವು ಭರಿಸಿಕೊಡುವ ಬಡ್ಡಿ ಸಹಾಯಧನದ ಪ್ರಮಾಣವನ್ನು ಶೇ. 8.5ರಷ್ಟು ಎಂದು ನಿಗದಿಗೊಳಿಸಲಾಗಿರುತ್ತದೆ.

1185 (1418) ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ (ಗುಳೇದಗುಡ್ಡ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಟ್ಟಣ ಸಹಕಾರ ಬ್ಯಾಂಕ್‌ಗಳ ಮೂಲಕ ನೇಕಾರರಿಗೆ ಕಲ್ಪಿಸಲಾದ ಬಡ್ಡಿ ಮನ್ನಾ ಯೋಜನೆಯಲ್ಲಿ ಕೋಟ್ಯಾಂತರ ರೂಪಾಯಿ ಅಕ್ರಮ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬ್ಯಾಂಕ್‌ಗಳಲ್ಲಿ ನೇಕಾರರ ಹೊರತಾಗಿ ಬಡ್ಡಿ ಮನ್ನಾ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಜಿ. ಟಿ. ದೇವೇಗೌಡ (ಸಹಕಾರ ಸಚಿವರು) :

ಅ) ಪಟ್ಟಣ ಸಹಕಾರ ಬ್ಯಾಂಕುಗಳ ಮೂಲಕ ನೇಕಾರರಿಗೆ ಕಲ್ಪಿಸಲಾದ ಬಡ್ಡಿ ಮನ್ನಾ ಯೋಜನೆಯಲ್ಲಿ ಕೋಟ್ಯಾಂತರ ರೂಪಾಯಿ ಅಕ್ರಮ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ಪಡೆದ ಸಾಲಗಳ ಮೇಲಿನ ಬಡ್ಡಿ ಮನ್ನಾ ಹೊರತಾಗಿ ಬೇರೆ ಬಡ್ಡಿ ಮನ್ನಾ ಮಾಡಿರುವುದಿಲ್ಲ.

ಇ) ಅನ್ವಯಿಸುವುದಿಲ್ಲ.

1186 (1345) ಶ್ರೀ ನಾಗರಾಜು ಎಂ.ಟಿ.ಬಿ. (ಹೊಸಕೋಟೆ) : ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ ಹಂಚಲಾದ ಪಡಿತರ ಚೀಟಿಗಳು ಎಷ್ಟು; (ತಾಲ್ಲೂಕುವಾರು ಮಾಹಿತಿ ಒದಗಿಸುವುದು);

ಆ) ಆ ಪೈಕಿ ಬಿಪಿಎಲ್, ಎಪಿಎಲ್ ಪಡಿತರ ಚೀಟಿ ವಿತರಣೆ ಮಾಡಿರುವುದು ಎಷ್ಟು; (ತಾಲ್ಲೂಕುವಾರು ಮಾಹಿತಿ ಒದಗಿಸುವುದು);

ಇ) ಬಿಪಿಎಲ್, ಎಪಿಎಲ್ ಪಡಿತರ ಚೀಟಿಯಲ್ಲಿ ಆಹಾರ ಪದಾರ್ಥ ಹಾಗೂ ಸೀಮೆ ಎಣ್ಣೆ ವಿತರಣೆಯಲ್ಲಿ ಉಂಟಾಗಿರುವ ಗೊಂದಲ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ ತೆಗೆದುಕೊಂಡ ಕ್ರಮಗಳೇನು?

ಶ್ರೀ ಗೋವಿಂದ ಎಂ.ಕಾರಜೋಳ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಜಿಲ್ಲೆಯ ಈ ಕೆಳಕಂಡ ತಾಲ್ಲೂಕುಗಳಲ್ಲಿ ಹಂಚಲಾದ ಪಡಿತರ ಚೀಟಿಗಳ ವಿವರ:

ತಾಲ್ಲೂಕು	ಹಂಚಲಾದ ಒಟ್ಟು ಪಡಿತರ ಚೀಟಿಗಳು
ಚನ್ನಪಟ್ಟಣ	61577
ದೇವನಹಳ್ಳಿ	42665
ದೊಡ್ಡ	59194